## ರಾಷ್ಟ್ರೀಯ ಭಯೋತ್ಪಾದನಾ ನಿಗ್ರಹ ಕೇಂದ್ರ(ಎನ್‌ಸಿಟಿಸಿ) ನಿರ್ಮಿಸಲು

## ಕೇಂದ್ರ ಗೃಹ ಸಚಿವರು ಮಾಡಿದ ಮನವಿಗೆ ಶ್ರೀ ಅರುಣ್ ಜೇಟ್ಲೆಯವರ ಪ್ರತಿಕ್ರಿಯೆ

ದೇಶೀಯ ಮತ್ತು ಗಡಿಯಾಚೆಗಿನ ಭಯೋತ್ಪಾದನೆಯ ಪ್ರಭಾವಕ್ಕೆ ಭಾರತ ಕಳೆದ ಮೂರು ದಶಕಗಳಿಂದ ಒಳಗಾಗಿದೆ. ಪಂಜಾಬಿನಲ್ಲಿ ತಲೆಯೆತ್ತಿದ ಭಯೋತ್ಪಾದನೆಯನ್ನು ನಾವು ಯಶಸ್ವಿಯಾಗಿ ಮಟ್ಟಹಾಕಿದ್ದೇವೆ. ಜಮ್ಮು ಹಾಗೂ ಕಾಶ್ಮೀರದಲ್ಲಿ ಪರಿಸ್ಥಿತಿ ಮುಂಚೆಗಿಂತ ಉತ್ತಮವಾಗಿದೆ. ಆದರೆ, ಅಲ್ಲಿ ಹಿಂಸಾಚಾರ ಭುಗಿಲೇಳಲು ಕನಿಷ್ಠ ಪ್ರಮಾಣದ ಪ್ರಚೋದನೆ ಸಾಕು. ದೇಶದ ಈಶಾನ್ಯ ಪ್ರಾಂತ್ಯಗಳು ದಂಗೆಯ ದವಡೆಗೆ ಸಿಲುಕಿವೆ.

ಭಾರತವು ಯಾವುದೇ ದೇಶೀಯ ಜಿಹಾದ್ ಬಂಡೂಕೋರರ ಪ್ರಭಾವಕ್ಕೆ ಒಳಗಾಗಿಲ್ಲ ಎಂದು ಒಂದು ದಶಕದ ಹಿಂದೆ ನಾವು ಹೆಮ್ಮೆಯಿಂದ ನುಡಿಯುತ್ತಿದ್ದೆವು. ಇಂದು ಅಂತಹ ಪರಿಸ್ಥಿತಿಯಿಲ್ಲ. ನಮ್ಮ ಪಶ್ಚಿಮದ ನೆರೆ ರಾಷ್ಟ್ರವು ಸರ್ಕಾರಿ ಬೆಂಬಲ ಹಾಗೂ ಸರ್ಕಾರೇತರ ಬಂಡುಕೋರರ ನೆರವಿನಿಂದ ಭಾರತದಲ್ಲಿ ಉಪದ್ರವ ಎಬ್ಬಿಸುತ್ತಿದೆ. ಭಯೋತ್ಪಾದನೆ ವಿರುದ್ಧ ಸಂಘಟಿತ ಹೋರಾಟ ನಡೆಸುವ ಅಗತ್ಯ ಭಾರತಕ್ಕಿದೆ. ಭಯೋತ್ಪಾದನೆ ವಿರುದ್ಧದ ಹೋರಾಟ ನಿರಂತರವಾಗಿರಬೇಕು– ಅದು ಅಡ್ಡಿಪಡಿಸದಂತಿರಬೇಕು.

ಭಯೋತ್ಪಾದನೆ ಕುರಿತು ಯುಪಿಎ ಮೃದು ಧೋರಣೆ ಹೊಂದಿರುವ ಹಲವಾರು ಉದಾಹರಣೆಗಳನ್ನು ವರ್ತಮಾನದ ಇತಿಹಾಸದ ಕೆಲವು ಕುತುಹಲಕಾರಿ ಅಧ್ಯಾಯಗಳಲ್ಲಿ ಕಾಣಬಹುದು. ಎನ್‌ಡಿಎ ಸರ್ಕಾರ ಭಯೋತ್ಪಾದನಾ ನಿಯಂತ್ರಣ ಕಾಯಿದೆಯನ್ನು ಜಾರಿಗೆ ತಂದಾಗ, ಅದನ್ನು ಭಯೋತ್ಪಾದನಾ ವಿರೋಧಿ ಕಾನೂನು ಎಂದು ಹೇಳುವ ಬದಲು ಅದು ಅಲ್ಪಸಂಖ್ಯಾತರ ವಿರೋಧಿ ಕಾನೂನು ಎಂದು ಕಾಂಗ್ರೆಸ್ ಪಕ್ಷ ದೂಷಿಸಿತ್ತು. ಭಯೋತ್ಪಾದಕರ ವಿರುದ್ಧ ತನಿಖೆ ನಡೆಸಿ ಅವರನ್ನು ದಂಡಿಸಲು ಪೋಟಾ ಪ್ರಬಲ ಅಸ್ತ್ರವಾಗಿ ರೂಪುಗೊಂಡಿತ್ತು. ಯುಪಿಎ ಚುನಾವಣಾ ಪ್ರಣಾಳಿಕೆಯು ಪೋಟಾ ಕಾನೂನು ರದ್ದುಗೊಳಿಸುವ ಆಶ್ವಾಸನೆ ನೀಡಿತ್ತು. ಭಾಜಪ ಅಲ್ಲದೆ ದೇಶದ ಭದ್ರತಾ ಸಂಘಟನೆಗಳೂ ಕೂಡ ಪೋಟಾ ತೆರುವುಗೊಳಿಸುವ ನಿರ್ಧಾರದಿಂದ ಅಸಂತುಷ್ಟಗೊಂಡಿದ್ದವು. ಕಾನೂನು ಬಾಹಿರ ಚಟುವಟಿಕೆಗಳ(ಪ್ರತಿಬಂಧಕ) ಕಾಯಿದೆಗೆ ತಿದ್ದುಪಡಿ ತರುವ ಅನಿವಾರ್ಯತೆ ಯುಪಿಎ ಸರ್ಕಾರಕ್ಕೆ ಒದಗಿಬಂತು. ಇದರಲ್ಲಿ ಪೋಟಾದ ಕೇವಲ ಎರಡು ಅಂಶಗಳನ್ನು ಮಾತ್ರ ಸೇರಿಸಿಕೊಳ್ಳಲಾಯಿತು. ಜಾಮೀನು ಹಾಗೂ ತಪ್ಪೊಪ್ಪಿಗೆ ಸ್ವೀಕಾರ ಕುರಿತ ಎರಡು ಅಂಶಗಳನ್ನು ಕೈಬಿಡಲಾಯಿತು. ಶ್ರೀ ಪಿ. ಚಿದಂಬರಂ ಅವರು ಗೃಹ ಖಾತೆ ಜವಾಬ್ದಾರಿ ವಹಿಸಿಕೊಂಡಾಗ, ಮಾವೋವಾದಿಗಳ ಹಿಂಸಾ ಕೃತ್ಯಗಳ ಕುರಿತು ನೀಡಿದ ಆರಂಭಿಕ ಹೇಳಿಕೆಗಳು ಪ್ರೋತ್ಸಾಹದಾಯಕವಾಗಿತ್ತು. ಆದರೆ ಕಾಂಗ್ರೆಸ್ ಪಕ್ಷದ ಆಂತರಿಕ ಪ್ರಕಟಣೆಯಲ್ಲಿ ಯುಪಿಎ ಅಧ್ಯಕ್ಷರು ಪ್ರಕಟಿಸಿದ ಒಂದು ಲೇಖನದಿಂದ ಅವರ ಹುಮ್ಮಸ್ಸು ಕ್ಷೀಣಿಸಿತು.

ಅವರು ತಮ್ಮ ನಿಲುವನ್ನು ಬದಲಾಯಿಸಿದರು. ಮಾವೋವಾದಿಗಳ ವಿರುದ್ಧದ ಹೋರಾಟ ಆಯಾ ರಾಜ್ಯಗಳ ಜವಾಬ್ದಾರಿಯಾಗಿದ್ದು, ಗುಪ್ತಚರ್ಯೆ ಸಾಮರ್ಥ್ಯ ವೃದ್ಧಿ ಹಾಗೂ ಭದ್ರತಾ ಪಡೆಗಳನ್ನು ಒದಗಿಸುವ ಕಾರ್ಯವನ್ನು ಮಾತ್ರ ಕೇಂದ್ರ ಸರ್ಕಾರ ಮಾಡಬಲ್ಲದು ಎಂಬ ಹೊಸ ಆಲಾಪನೆಗೆ ಶೃತಿ ಜೋಡಿಸಿದರು.

ಭಯೋತ್ಪಾದನೆ ವಿರುದ್ಧದ ಹೋರಾಟವು ಕೇಂದ್ರ ಹಾಗೂ ರಾಜ್ಯಗಳ ಸಂಯುಕ್ತ ಜವಾಬ್ದಾರಿಯಾಗಿದೆ. ಭಾರತದ ಸಾರ್ವಭೌಮತೆಗೆ ಧಕ್ಕೆ ತರುವ ಕೆಲಸವನ್ನು ಭಯೋತ್ಪಾದನೆ ಮಾಡುತ್ತದೆ. ಸಾರ್ವಜನಿಕ ಸಂಯಮ ಹಾಗೂ ಕಾನೂನು ಸುವ್ಯವಸ್ಥೆಗೆ ಚ್ಯುತಿ ತರುವ ಪ್ರಯತ್ನ ನಡೆಸುತ್ತದೆ. ನಮ್ಮ ಸಂವಿಧಾನದ ಆಶಯದಂತೆ ಭಾರತದ ರಕ್ಷಣೆಯ ಜವಾಬ್ದಾರಿ ಕೇಂದ್ರ ಸರ್ಕಾರದ್ದಾಗಿದೆ. ಸಾರ್ವಜನಿಕ ಸಂಯಮ ಹಾಗೂ ಪೋಲಿಸ್ ವ್ಯವಸ್ಥೆ ಬರುವುದು ರಾಜ್ಯಗಳ ಜವಾಬ್ದಾರಿಯಾಗಿದೆ. ಭಯೋತ್ಪಾದನೆ ವಿರುದ್ಧದ ಹೊರಾಟ ಹಾಗೂ ಒಕ್ಕೂಟ ವ್ಯವಸ್ಥೆ ಇವೆರಡೂ ಒಂದಕ್ಕೊಂದು ಹೊಂದಿಕೊಂಡಿರುವುದು ಮುಖ್ಯ. ಒಕ್ಕೂಟ ವ್ಯವಸ್ಥೆ ವಿರುದ್ಧ ಭಯೋತ್ಪಾದನೆ ಎಂದ ಕಾಲ್ಪನಿಕ ವಿಚಾರವನ್ನು ಚರ್ಚಿಸುವುದರಲ್ಲಿ ಅರ್ಥವಿಲ್ಲ.

ರಾಷ್ಟ್ರೀಯ ಭಯೋತ್ಪಾದನಾ ನಿಗ್ರಹ ಕೇಂದ್ರದ ಕುರಿತು ಆಕ್ಷೇಪ ಎತ್ತಲು ಯಾವುದೇ ಕಾರಣಗಳಿಲ್ಲ, ಆದರೆ ಅದರ ಅಧಿಕಾರ ಹಾಗೂ ವ್ಯಾಪ್ತಿಯು ಸಂವಿಧಾನದ ಚೌಕಟ್ಟನ್ನು ಮೀರಬಾರದು. ಗಡಿಯಾಚೆಗಿನ ಗುಪ್ತ ಮಾಹಿತಿ ಸಂಗ್ರಹಿಸುವುದು ಹಾಗೂ ಹೊರಗಿನಿಂದ ಬಿಕ್ಕಟ್ಟು ಸೃಷ್ಟಿಸಲು ನಡೆಸುವ ಯತ್ನಗಳ ಮೇಲೆ ನಿಗಾವಹಿಸುವ ಜವಾಬ್ದಾರಿ ಹಾಗೂ ಸಾಮರ್ಥ್ಯ ಕೇವಲ ಕೇಂದ್ರ ಸರ್ಕಾರಕ್ಕಿದೆ. ಭಯೋತ್ಪಾದನಾ ಸಂಘಟನೆಗಳು ಅಂತರರಾಜ್ಯ ಮಟ್ಟದಲ್ಲಿ ಕಾರ್ಯವಹಿಸುತ್ತವೆ. ರಾಷ್ಟ್ರೀಯ ಗುಪ್ತಚರ್ಯೆ ಹಾಗೂ ಉಪಯುಕ್ತ ಮಾಹಿತಿಗಳನ್ನು ರಾಜ್ಯಗಳಿಗೆ ರವಾನಿಸುವ ಜವಾಬ್ದಾರಿಯೂ ಕೇಂದ್ರ ಸರ್ಕಾರದ್ದಾಗಿದೆ. ಅಕ್ರಮ ಚಟುವಟಿಕೆಗಳ(ನಿಯಂತ್ರಣ) ಕಾಯಿದೆಯಡಿ ಅಪರಾಧಗಳ ತನಿಖೆ ನಡೆಸುವ ರಾಷ್ಟ್ರೀಯ ತನಿಖಾ ಸಂಸ್ಥೆ ಆರಂಭಿಸುವ ಮೂಲಕ ಕೇಂದ್ರ ಸರ್ಕಾರದ ಬಲವರ್ಧನೆಯಾಗಿದೆ. ಸಮರ್ಪಕವಾದ ಸಂಗ್ರಹ ಮತ್ತು ಪ್ರಸರಣಾ ಯಂತ್ರದ ಸ್ಥಾಪನೆ ಒಪ್ಪಬಹುದಾದ ವಿಚಾರವಾಗಿದೆ. ಎನ್ಐಎ ಅಥವಾ ರಾಜ್ಯ ಪೋಲಿಸರ ಸುಪ್ಪತ್ತಿಗೆಯಲ್ಲಿ ಇರಬೇಕಾದ ಎನ್‌ಸಿಟಿಸಿಗೆ ಕೇಂದ್ರ ಸರ್ಕಾರವು ಪೋಲಿಸ್ ಅಧಿಕಾರವನ್ನು ನೀಡುವ ಅಗತ್ಯವೇನಿದೆ?

ಗುಪ್ತಚರ್ಯೆ ವಿಭಾಗದ ಅಡಿ ಎನ್‌ಸಿಟಿಸಿ ಆರಂಭಿಸುವ ಪ್ರಸ್ತಾಪವಿದೆ. ಅದರ ನಿರ್ದೇಶಕರು ಐಬಿ ನಿರ್ದೇಶಕರ ಅಡಿ ಕಾರ್ಯವಹಿಸುತ್ತಾರೆ. ಗುಪ್ತಚರ್ಯೆ ವಿಭಾಗವು ಪೋಲಿಸ್ ಅಧಿಕಾರವನ್ನು ಹೊಂದುವ ಅಗತ್ಯವಿಲ್ಲ. ಅಮೇರಿಕಾದ ಎನ್‌ಸಿಟಿಸಿ ಕೇವಲ ತಂತ್ರಗಾರಿಕೆಯ ಯೋಜನೆ ಹಾಗೂ ಬೇಹುಗಾರಿಕೆಯ ಸಮನ್ವಯತೆಯ ವಿಚಾರದಲ್ಲಿ ಸಕ್ರಿಯ ಪಾತ್ರ ವಹಿಸುತ್ತದೆಯೇ ಹೊರತು ಸಕ್ರಿಯ ಕಾರ್ಯಚರಣೆಯಲ್ಲಿ ಭಾಗವಹಿಸುವುದಿಲ್ಲ. ಜಂಟಿ ಭಯೋತ್ಪಾದನಾ ಅಧ್ಯಯನ ಕೇಂದ್ರವು ಸಮನ್ವಯತೆಯ ಪಾತ್ರ ವಹಿಸುತ್ತದೆ. ಗುಪ್ತಚರ್ಯೆಯೊಂದಿಗೆ ಕಾರ್ಯಾಚರಣೆಯ ಜವಾಬ್ದಾರಿಯನ್ನು ನಿರ್ವಹಿಸಬಲ್ಲ ಸಂಸ್ಥೆಯನ್ನು ನಿರ್ಮಿಸುವ

ಪ್ರಸ್ತಾಪ ಭಾರತ ಸರ್ಕಾರಕ್ಕಿದೆ. ರಾಜ್ಯಗಳು ಹೊಂದಿರುವ ಕಾನೂನು ಸುವ್ಯವಸ್ಥೆಯ ಕರ್ತವ್ಯ ಹರಣಮಾಡುವ ಜಂಟಿ ಕರ್ತವ್ಯದ ಪ್ರಸ್ತಾಪಕ್ಕೆ ರಾಜ್ಯಗಳು ಆಕ್ಷೇಪಿಸಿವೆ.

ಕೇಂದ್ರ ಸರ್ಕಾರವು ರಾಜ್ಯಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆಯಿರಲು ಕಾರಣವೇನು? ಕಾರ್ಯಾಚರಣೆ ಜವಾಬ್ದಾರಿಯನ್ನು ರಾಜ್ಯ ಪೋಲಿಸರ ಸಮನ್ವಯದೊಂದಿಗೆ ನಿರ್ವಹಿಸುವ ಪ್ರವೃತ್ತಿಯನ್ನು ಎನ್‌ಸಿಟಿಸಿ ಹೊಂದಬೇಕಾಗಿದೆ. ಭಯೋತ್ಪಾದನೆ ನಿಗ್ರಹ ಚಟುವಟಿಕೆಗಳಲ್ಲಿ ಭಾರತದ ರಾಜ್ಯಗಳ ಪೋಲಿಸರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆಯಿರಲು ಯಾವುದೇ ಕಾರಣಗಳಿವಿಯೇ? ವಿಶೇಷ ಸಂದರ್ಭಗಳಲ್ಲಿ ಪೋಲಿಸಿರೊಂದಿಗೆ ಎನ್‌ಐಎ ಕೂಡ ಕಾರ್ಯಾಚರಣೆಯಲ್ಲಿ ಭಾಗವಹಿಸಬಹುದಾಗಿದೆ.

ಶೋಧ, ಸ್ವಾಧೀನ ಹಾಗೂ ಸೆರೆಹಿಡಿಯುವ ಅಧಿಕಾರವನ್ನು, ಅಂದರೆ ಕಾರ್ಯಾಚರಣೆಯ ಜವಾಬ್ದಾರಿಗಳನ್ನು ಗುಪ್ತಚರ ವಿಭಾಗಕ್ಕೆ ನೀಡುವುದು ಅಪಾಯಕಾರಿ. ಗುಪ್ತಚರ ವಿಭಾಗವು ಗುಪ್ತರೀತಿಯಲ್ಲಿ ಕಾರ್ಯವಹಿಸುತ್ತದೆ. ಅದೊಂದು ಶಾಸನರಹಿತ ರಚನೆಯಾಗಿದೆ. ಅದರ ಆಯವ್ಯಯ ಮತ್ತು ಖರ್ಚು ಲೆಖ್ಖಕ್ಕೆ ಬಾರದು. ಇತ್ತೀಚೆಗೆ, ಪ್ರಮುಖ ರಾಷ್ಟ್ರೀಯ ಸಂಪನ್ಮೂಲವಾದ ಐಬಿ ವಿಭಾಗವು ಭದ್ರತಾ ಸಂಬಂಧಿ ಚಟುವಟಿಕೆಗಳತ್ತ ನಿಗಾ ವಹಿಸುವ ಬದಲು ರಾಜಕೀಯ ಮತ್ತು ಅರೆ–ರಾಜಕೀಯ ಚಟುವಟಿಕೆಗಳತ್ತ ಹೆಚ್ಚಿನ ಗಮನ ಹರಿಸುತ್ತಿದೆ.

ಈ ಒಂದು ಪ್ರವೃತ್ತಿಯನ್ನು ನಿಲ್ಲಿಸುವ ಅಗತ್ಯವಿದೆ ಎಂಬ ಬಲವಾದ ಅಭಿಪ್ರಾಯ ನನ್ನದು. ರಾಜಕೀಯ ಬೆಳವಣಿಗೆಗಳ ಮಾಹಿತಿ ಸಂಗ್ರಹ ಅಥವಾ ತನಿಖೆ ನಡೆಸುವುದು ಐಬಿಯ ಪ್ರಮುಖ ಕರ್ತವ್ಯವಲ್ಲಾ. ಗುಪ್ತ ಮಾಹಿತಿಗಳ ಸಂಗ್ರಹ, ಸಂಸ್ಕರಣೆ ಹಾಗೂ ಸಂವಹನೆಗಷ್ಟೆ ಅದರ ಕಾರ್ಯವ್ಯಾಪ್ತಿ ಪಸರಿಸಬೇಕು. ಇದನ್ನೇ ಎನ್‌ಸಿಟಿಸಿ ಕೂಡ ನಿರ್ವಹಿಸಬೇಕು.